ಕಥೆ

# ಚಿಲ್ಲಾ



**ಗಣೇಶ್ ಪ್ರಸಾದ್ ಮಂಜೇಶ್ವರ**

ಕಲೆ: ಪ್ರಭಾಕರ ಹೆಗಡೆ

ಸ್ವರಾಲಂಕೃತಳಾದ ಸೋಹನಿ ರಾಗದ ತಾರ ಷಡ್ಜದಿಂದ ಚಿನ್ನದ ಸೂಕ್ಷ್ಮವಾದ ಸರಿಗೆಯಂಥ ಬಿಜಲಿ ತಾನು ಮೇಲಕ್ಕೆ ಹೊರಟದ್ದು ಕಂಡು ಕಣ್ಣು ಬಿಟ್ಟ ಮಿಹಿರ ವಿಸ್ಮಿತನಾದ. ಶೃಂಗಾರ ರಾಗಿಣಿ ಸೋಹನಿ ಸಹಜವಾಗಿ ಒಲಿದಾಗ ಮಾತ್ರ ಈ ರೀತಿಯ ತಾನುಗಳು ಹೊರಡಲು ಸಾಧ್ಯ. ಅಬ್ಬಾ ಎಂಥಾ ಕನಸು! ಆ ರಾಗವು ಸ್ವಲ್ಪ ಆತಂಕ ಮತ್ತು ಕಸಿವಿಸಿ ಉಂಟು ಮಾಡಿತ್ತು. ಬೆವರಿ ತೊಪ್ಪೆಯಾಗಿದ್ದ ಅವನು. ಆ ಅನುಭವದ ಆಳ ಅಗಲ ಒಬ್ಬ ಸಂಗೀತಗಾರ ಮಾತ್ರ ಅರಿಯಬಲ್ಲ. ಕಣ್ಣುಗಳು ಉರಿಯುತ್ತಿವೆ, ತಲೆ ಸುತ್ತುತ್ತಿದೆ. ನಿದ್ರೆ ತುಂಬಾ ಕಡಿಮೆ ಸಿಗುತ್ತಿತ್ತು ಮಿಹಿರನಿಗೆ ಇತ್ತೀಚೆಗೆ. ಒಡೆದ ಹಂಚಿನ ಸೂರಿನಿಂದ ಆಗಸ ಬಣ್ಣ ಬದಲಾಯಿಸುತ್ತಿರುವುದು ಕಾಣಿಸಿತು ಅವನಿಗೆ. ಅಪ್ಪ ಹೊಲದಿಂದ ಬರುವ ಹೊತ್ತಾಗಿದೆ. ರಾತ್ರಿ ಕಾವಲಿಗೆ ಹೋದವ ಬೆಳಗ್ಗೆ ನಿದ್ದೆಗಣ್ಣಲ್ಲಿ ಬಂದು ಇನ್ನೂ ಮಲಗಿರುವ ಅಥವಾ ತಂಬೂರಿಗೆ ಗತಿಯಿಲ್ಲವಾದರೂ ಹಳೆಯ ಹಾರ್ಮೋನಿಯಂನಲ್ಲಿ ಶ್ರುತಿಹಿಡಿದು ಹಾಡಿಕೊಳ್ಳುವ ಅವನನ್ನು ಯದ್ವಾ ತದ್ವಾ ಬೈದು ಸ್ನಾನಕ್ಕೆ ಹೋಗುವುದು ಪ್ರತಿದಿನ ಲಯಬದ್ಧವಾಗಿ ನಡೆಯುವ ಚಟುವಟಿಕೆ. ಅಪ್ಪ ಬರುವುದಕ್ಕೂ ಮೊದಲೇ ಅವನು ನದಿಯತ್ತ ಹೋಗಿಬಿಡುವ ಪರಿಪಾಠ ಶುರು ಮಾಡಿದ್ದನು. ಸಂಗೀತದ ಸೆಳೆತ ಅಷ್ಟಿತ್ತು ಅವನಲ್ಲಿ. ಇಂದು ಸಹ ಎದ್ದು ಕುಳಿತವನಿಗೆ ಆಮೇಲೆಯೇ ತಿಳಿದದ್ದು ಅವನು ಈಗ ಮನೆಯಲ್ಲಿಲ್ಲ! ಈ ಕೊಠಡಿಯಲ್ಲಿ ಬಂಧಿಯಾಗಿ ಹತ್ತು ದಿನವಾಗಿದೆ. ನಿದ್ರೆಯಿಲ್ಲದ ಕಾರಣ ಎಲ್ಲೊ ಒಂದೆರಡು ಘಳಿಗೆ ಕಣ್ಣು ತಾಗಿದಾಗ ಈ ರೀತಿಯ ಕನಸುಗಳು ಮತ್ತು ವಿಭ್ರಮೆಗಳು!. ಇವತ್ತು ಆ ರೀತಿ ನಿದ್ರೆ ಹತ್ತಿ ಕನಸು ಕಂಡು ಕಣ್ಣು ಬಿಟ್ಟಾಗ ತಾನು ಚಿಲ್ಲಾಖಾನೆಗೆ ಬಂದ ವಿಚಾರವೇ ಮರೆತು ಹೋಗಿದೆ!

ಉಸ್ತಾದರು ತನ್ನಂಥ ಶಿಷ್ಯನಿಗೆ ಚಿಲ್ಲಾ ಮಾಡಲು ಹೇಳಿಯಾರು ಎಂದು ಅವನು ಕನಸು ಮನಸಲ್ಲೂ ಯೋಚಿಸಿರಲಿಲ್ಲ. ಚಿಲ್ಲಾ ಎಂಬ ಹೆಸರು ಕೇಳಿದರೆ ಗಂಟಲ ಪಸೆ ಆರುತ್ತದೆ. ಗಟ್ಟಿ ಗುಂಡಿಗೆ ಕೂಡ ಧಸಕ್ ಎನ್ನುತ್ತದೆ. ಉಸ್ತಾದ್ ಮುಫೀದ್ ಖಾನರು ಎಂಟು ಬಾರಿ ಚಿಲ್ಲಾ ಮಾಡಿ ಉಸ್ತಾದರಾಗಿದ್ದರು. ಜನಸಂಚಾರದಿಂದ ದೂರವಿರುವ ಕೋಣೆಯೊಂದರಲ್ಲಿ ಒಬ್ಬನೇ ನಲವತ್ತು ದಿನ ಕುಳಿತು, ಹಗಲು ರಾತ್ರಿ ಎನ್ನದೆ ಗುರು ನೀಡಿದ ರಾಗವನ್ನು ಸಾಧಿಸಬೇಕು. ಮನೆಗೆ ಹೋಗುವಂತಿಲ್ಲ. ಗುರುವಲ್ಲದೇ ಯಾರ ಜೊತೆಗೂ ಮಾತನಾಡುವಂತಿಲ್ಲ. ರಾಗದ ನಿರ್ದಿಷ್ಟವಾದ ಚಲನೆಯನ್ನೋ ಆಲಾಪವನ್ನೋ, ತಾನುಗಳನ್ನೋ ಶಿಷ್ಯ ಒಬ್ಬನೇ ಕುಳಿತು ತಾಲೀಮು ಮಾಡಬೇಕು. ಈ ಹಂತದಲ್ಲೇ ಗುರು ಕಲಿಸಿದ್ದಕ್ಕೂ ಮೀರಿ ಸ್ವಂತ ಮನೋಧರ್ಮದ ಆಧಾರದಲ್ಲಿ ಸೃಜನಶೀಲ ಆವಿಷ್ಕಾರಗಳು ನಡೆದು